

بِسۡمِ اللّٰہِ الرَّحۡمٰنِ الرَّحِیۡمِ

# ವಖ್‌ಫೆ ನೌ – ಒಂದು ಮಹತ್ವಪೂರ್ಣ ಯೋಜನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಕೆನಡದ ಟೊರೋಂಟೋದ ಬೈತುಲ್ ಇಸ್ಲಾಂ ಮಸ್ಜಿದ್‌ನಿಂದ **28-10-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಮಕ್ಕಳನ್ನು ವಕ್ಫ್ ಮಾಡುವ ಆಸಕ್ತಿ ನಮ್ಮ ಜಮಾಅತಿನಲ್ಲಿ ವರ್ಧಿಸುತ್ತಾ ಇದೆ. ತಂದೆ ತಾಯಂದಿರು ತಮಗೆ ಜನಿಸುವ ಮಕ್ಕಳನ್ನು ವಕ್ಫ್‌ನಲ್ಲಿ ಸೇರಿಸುವಂತೆ ಅಪೇಕ್ಷಿಸುತ್ತಿರುವ ಪತ್ರಗಳು ನನಗೆ ದಿನಂಪ್ರತಿ ಬರುತ್ತಾ ಇರುತ್ತವೆ. ಕೆಲವು ದಿನಗಳಲ್ಲಿ ಅಂತಹ ಇಪ್ಪತ್ತು ಇಪ್ಪತ್ತೈದು ಪತ್ರಗಳು ಲಭಿಸುತ್ತವೆ. ಆರಂಭದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ (ರಹ್) ಈ ಯೋಜನೆಯನ್ನು ಜಾರಿಗೊಳಿಸಿದಾಗ ಅದೊಂದು ತಾತ್ಕಾಲಿಕ ಯೋಜನೆಯಾಗಿತ್ತು. ನಂತರ ಅವರು ಅದನ್ನು ಸ್ಥಿರವಾದ ಒಂದು ಯೋಜನೆಯನ್ನಾಗಿ ಮಾಡಿದರು. ಪ್ರತಿಯೊಂದು ದೇಶದಲ್ಲಿಯೂ ಜಮಾಅತ್ ಸದಸ್ಯರು, ವಿಶಿಷ್ಟತಃ ಮಾತೆಯರು, ಅದಕ್ಕೆ ಲಬ್ಬೈಕ್ ಹೇಳಿದರು. ಹನ್ನೆರಡು ಹದಿಮೂರು ವರ್ಷಗಳ ಹಿಂದೆ ವಾಕಿಫೀನೆ ನೌಗಳ ಸಂಖ್ಯೆ 28000 ಇದ್ದುದು, ಈಗ ಈ ಸಂಖ್ಯೆ ಅಲ್ಲಾಹನ ಅನುಗ್ರಹದಿಂದ 61000ವನ್ನು ತಲಪಿದೆ. ಇದರಲ್ಲಿ 36 ಸಾವಿರಕ್ಕಿಂತ ಸ್ವಲ್ಪ ಹೆಚ್ಚು ಹುಡುಗರು ಹಾಗೂ ಉಳಿದವರು ಹುಡುಗಿಯರು ಆಗಿದ್ದಾರೆ. ತಮಗೆ ಜನಿಸಲಿರುವ ಮಗುವನ್ನು ವಕ್ಫ್ ಮಾಡುವ ಆಕಾಂಕ್ಷೆ ಜಮಾಅತ್ ಸದಸ್ಯರಲ್ಲಿ ಹೆಚ್ಚುತ್ತಿರುವುದು ಕಂಡುಬರುತ್ತದೆ.

ಆದರೆ ಮಕ್ಕಳನ್ನು ವಕ್‌ಫ್ ಮಾಡಲು ಮುಂದಾಗುವುದರಿಂದ ತಂದೆ ತಾಯಂದಿರ ಹೊಣೆಗಾರಿಕೆಗಳು ಮುಗಿತಾಯವಾಗುವುದಿಲ್ಲ. ಅವರ ಹೊಣೆಗಾರಿಕೆಗಳು ಮೊದಲಿಗಿಂತ ಹೆಚ್ಚು ಆಗುತ್ತವೆ. ಒಬ್ಬ ಅಹ್ಮದಿ ಮಗುವನ್ನು ತರಬೇತಿ ಮಾಡುವ ಹೊಣೆಗಾರಿಕೆ ನಿಶ್ಚಯವಾಗಿಯೂ ಅದರ ತಂದೆ ತಾಯಿಯ ಮೇಲಿದೆ. ತಂದೆ ತಾಯಿ ತಮ್ಮ ಮಕ್ಕಳ ಸ್ಥಿತಿ ಉತ್ತಮವಾಗಬೇಕೆಂದು ಇಚ್ಛಿಸುತ್ತಾರೆ. ಅವರಿಗೆ ಲೌಕಿಕ ವಿದ್ಯಾಭ್ಯಾಸ ನೀಡಲು ಬಯಸುತ್ತಾರೆ. ಅವರಿಗೆ ತರಬೇತಿ ನೀಡಲು ಬಯಸುತ್ತಾರೆ. ತಂದೆ ತಾಯಿ ಧಾರ್ಮಿಕ ಆಸಕ್ತಿ ಹೊಂದಿದವರಾಗಿದ್ದರೆ ಮಕ್ಕಳಿಗೆ ಧಾರ್ಮಿಕ ವಿದ್ಯಾಭ್ಯಾಸ ನೀಡಲು ಸಹ ಬಯಸುತ್ತಾರೆ. ಆದರೆ ನೆನಪಿಡಬೇಕಾದುದೇನೆಂದರೆ ಪ್ರತಿಯೊಂದು ಮಗು ಮತ್ತು ವಿಶಿಷ್ಟವಾಗಿ ವಕ್ಫೇ ನೌಗೆ ಸೇರಿದ ಮಗು ಜಮಾಅತಿನ ಅಮಾನತ್ ಆಗಿ ತಂದೆ ತಾಯಿಯ ಬಳಿಯಲ್ಲಿರುವುದಾಗಿದೆ. ಅದಕ್ಕೆ ತರಬೇತಿ ನೀಡಿ ಅದನ್ನು ಜಮಾಅತಿನ ಮತ್ತು ಸಮಾಜದ ಅತ್ಯುತ್ತಮ ಭಾಗವನ್ನಾಗಿ ಮಾಡುವುದು ತಂದೆ ತಾಯಿಯ ಕಡ್ಡಾಯ ಕರ್ತವ್ಯವಾಗಿದೆ. ವಾಕಿಫೀನೆ ನೌ ಮಕ್ಕಳಿಗೆ ತರಬೇತಿ ನೀಡುವುದು, ಅವರಿಗೆ ಲೌಕಿಕ ಮತ್ತು ಧಾರ್ಮಿಕ ವಿದ್ಯಾಭ್ಯಾಸ ನೀಡುವ ಬಗ್ಗೆ ವಿಶಿಷ್ಟ ಗಮನ ಹರಿಸುವುದು ಮತ್ತು ಅವರನ್ನು ಉತ್ತಮವಾಗಿ ಸಿದ್ಧಪಡಿಸಿ ಜಮಾಅತಿಗೆ ನೀಡುವುದು ತಂದೆ ತಾಯಂದಿರ ಹೊಣೆಗಾರಿಕೆಯಾಗುವುದು ಏಕೆಂದರೆ ತಂದೆ ತಾಯಿ ಆ ಮಕ್ಕಳು ಜನಿಸುವ ಮೊದಲು ಪ್ರತಿಜ್ಞೆ ಮಾಡುತ್ತಾರೆ: 'ನಮ್ಮಲ್ಲಿ ಜನಿಸುವ ಮಗು ಗಂಡಾಗಲಿ ಹೆಣ್ಣಾಗಲಿ ಅದನ್ನು ಧಾರ್ಮಿಕ ಕಾರ್ಯಗಳಿಗೋಸ್ಕರ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನ ಆಗಮನೋದ್ದೇಶವನ್ನು ಈಡೇರಿಸಲು ಜಮಾಅತಿಗೆ ಅರ್ಪಿಸುತ್ತೇವೆ' ಎಂದು. ನಾವು ನಮಗೆ ಜನಿಸಲಿರುವ ಮಗುವನ್ನು ಹಝ್ರತ್ ಮರ್‌ಯಮ್ ರವರ ತಾಯಿ ಮಾಡಿದಂತೆ, ಅಲ್ಲಾಹನೊಂದಿಗೆ ಒಂದು ಪ್ರತಿಜ್ಞೆ ಮಾಡುತ್ತಾ ವಕ್ಫೆ ನೌ ಸ್ಕೀಮಿನಲ್ಲಿ ಸೇರಿಸುತ್ತಿದ್ದೇವೆಂದು ಅವರು ಕಾಲದ ಖಲೀಫರಿಗೆ ಬರೆಯುತ್ತಾರೆ. رَبِّ إِنِّي نَذَرْتُ لَكَ مَا فِي بَطْنِي مُحَرَّرًا فَتَقَبَّلْ مِنِّي إِنَّكَ أَنْتَ السَّمِيعُ الْعَلِيمُ **ರಬ್ಬಿ ಇನ್ನೀ ನಧರ್‌ತುಲಕ ಮಾಫೀ ಬತ್‌ನೀ ಮುಹರ್ರರನ್ ಫತಖಬ್ಬಲ್ ಮಿನ್ನೀ ಇನ್ನಕ ಅನ್‌ತಸ್ಸಮೀಉಲ್ ಅಲೀಂ.** ನನ್ನ ಪ್ರಭೂ, ನನ್ನ ಉದರದಲ್ಲಿರುವ ಮಗುವನ್ನು ನಿನ್ನ ಸೇವೆಗಾಗಿ ಮೀಸಲಾಗಿರಿಸಲು ನಾನು ಹರಕೆ ಮಾಡಿದ್ದೇನೆ. ಆದ್ದರಿಂದ ನೀನು ನನ್ನಿಂದ ಅದನ್ನು ಸ್ವೀಕರಿಸು. ನಿಶ್ಚಯವಾಗಿಯೂ ನೀನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಅರಿಯುವವನೂ ಆಗಿರುವಿ. (3:36).

ಇದು ಸಾಮಾನ್ಯವಾದ ಹೊಣೆಗಾರಿಕೆಯೇನೂ ಅಲ್ಲ. ಈ ಹೊಣೆಗಾರಿಕೆಗಳ ಬಗ್ಗೆ ಪ್ರಜ್ಞೆ ಇರಬೇಕು. ಅವರು ತಮ್ಮ ಪ್ರತಿಜ್ಞೆ ಈಡೇರಿಸಲು ಮತ್ತು ಅದರ ಬಗ್ಗೆ ಮಾಡುವ ಪ್ರಾರ್ಥನೆಗಳನ್ನು ಅಲ್ಲಾಹನು ಅಂಗೀಕರಿಸುವಂತಾಗಲು ತಾಯಂದಿರು ಮತ್ತು ತಂದೆಯಂದಿರು ಅವರ ಹೊಣೆಗಾರಿಕೆಯನ್ನು ನಿಭಾಯಿಸಬೇಕಾಗಿದೆ. ವಕ್‌ಫೆ ನೌ ಪದ್ಧತಿಗೆ ಮಕ್ಕಳನ್ನು ತಂದೆ ಮತ್ತು ತಾಯಿ ಇವರಿಬ್ಬರ ಒಪ್ಪಿಗೆ ಪ್ರಕಾರ ಸೇರಿಸಲಾಗುತ್ತಿದೆ.

ಪ್ರತಿಯೊಬ್ಬ ಸತ್ಯವಿಶ್ವಾಸಿ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಪ್ರತಿಜ್ಞೆ ಮಾಡುತ್ತಾನಾದರೂ ಮಕ್ಕಳನ್ನು ವಕ್‌ಫ್ ಮಾಡುವವರು ಈ ಪ್ರತಿಜ್ಞೆ ಈಡೇರಿಸುವುದರಲ್ಲಿ ಅತ್ಯಂತ ಉನ್ನತ ಮಟ್ಟವನ್ನು ತಲಪುವವರಾಗಬೇಕು. ಆರಂಭದಿಂದಲೇ ತಂದೆ ತಾಯಂದಿರು ತಮ್ಮ ಮಕ್ಕಳಲ್ಲಿ 'ನೀವು ವಕ್‌ಫ್ ಮಾಡಲ್ಪಟ್ಟವರಾಗಿರುವಿರಿ. ಧಾರ್ಮಿಕ ಸೇವೆ ಮಾಡಲಿಕ್ಕೋಸ್ಕರ ನಿಮನ್ನು ವಕ್‌ಫ್ ಮಾಡಲಾಗಿದೆ. ಇದೇ ನಿಮ್ಮ ಜೀವಿತದ ಲಕ್ಷ್ಯವಾಗಬೇಕಾಗಿದೆ' ಎಂದು ಅವರಿಗೆ ಹೇಳಿಕೊಡುತ್ತಾ ಇರಬೇಕು. ಅದರೊಂದಿಗೆ ಅವರಿಗೋಸ್ಕರ ಪ್ರಾರ್ಥನೆ ಸಹ ಮಾಡುತ್ತಾ ಇರಬೇಕು. ಆಗ ಆ ಮಕ್ಕಳು ತಾವು ಧಾರ್ಮಿಕ ಸೇವೆ ಮಾಡಬೇಕಾಗಿದೆ ಎಂಬ ಮನೋಭಾವವನ್ನು ಹೊಂದಿ ಬೆಳೆಯುವರು. ಲೌಕಿಕ ಕಾರ್ಯಗಳಲ್ಲಿ ನಿಪುಣತೆಯನ್ನು ಹೊಂದಿ ಅದರಲ್ಲಿ ಅಭಿವೃದ್ಧಿ ಗಳಿಸಬೇಕೆಂಬ ಭಾವನೆ ಅವರಲ್ಲಿ ಉಂಟಾಗಲಾರದು. ಅವರು ಹೀಗೆ ಯೋಚಿಸುವರು: ನಾನು ವಕ್‌ಫೇ ನೌಗೆ

ಸೇರಿದವನಾಗಿದ್ದೇನೆ. ನನಗೆ ಜಮಾಅತ್ ಹೇಳಬೇಕು, ಖಲೀಫರು ಹೇಳಬೇಕು ನಾನು ಯಾವ ವಿಭಾಗಕ್ಕೆ ಹೋಗಬೇಕೆಂದು. ನನಗೆ ಲೌಕಿಕವಾದ ಯಾವ ಆಶೆಯೂ ಇಲ್ಲ. ನಾನು ಜನಿಸುವ ಮೊದಲು ನನ್ನ ತಾಯಿ ಮಾಡಿದ ಪ್ರತಿಜ್ಞೆ, ಅವರು ಮಾಡಿದ ಪ್ರಾರ್ಥನೆಗಳು, ನನ್ನ ಜನನದ ನಂತರ ನನಗೆ ನೀಡಲಾದ ತರಬೇತಿ, ಇವುಗಳು ನನಗೆ ದೊರೆತ ವರದಾನಗಳಾಗಿವೆ. ನನ್ನ ತಾಯಿಯ ಪ್ರಾರ್ಥನೆ ಅಲ್ಲಾಹನು ಅಂಗೀಕರಿಸಿದನು. ನನ್ನ ತರಬೇತಿಗೆ ನನ್ನ ತಾಯಿ ಮಾಡಿದ ಪ್ರಯತ್ನ ಫಲದಾಯಕವಾಯಿತು. ನಾನು ಈಗ ಯಾವುದೇ ಲೌಕಿಕ ಲಾಲಸೆಯಿಲ್ಲದೆ ಕೇವಲ ಧಾರ್ಮಿಕ ಕಾರ್ಯಗಳಿಗೋಸ್ಕರ ನನ್ನನ್ನು ಅರ್ಪಿಸುತ್ತೇನೆ ಎಂದು ಯೋಚಿಸುವರು. ವಾಕಿಫೀನೆ ನೌಗೆ ಸೇರಿದವರು ತಮಗೆ ಹದಿನೈದು ವರ್ಷ ಪ್ರಾಯವಾದಾಗ ತಮ್ಮ ವಕ್‌ಫನ್ನು ನವೀಕರಿಸುವ ಮೊದಲು ಮೇಲೆ ವಿವರಿಸಿದಂತಹ ಯೋಚನೆಯನ್ನು ಹೊಂದಿ ತಮ್ಮ ವಕ್‌ಫನ್ನು ನವೀಕರಿಸುವುದು ಆವಶ್ಯಕವಾಗಿದೆ. ಇದರ ಬಗ್ಗೆ ಇದಕ್ಕೆ ಸಂಬಂಧಿಸಿದ ಆಡಳಿತೆ ವ್ಯವಸ್ಥೆಗೆ ನಾನು ಮಾರ್ಗದರ್ಶನ ನೀಡಿದ್ದೇನೆ. ಅವರು ಹದಿನೈದು ವರ್ಷದವರಾದಾಗ ವಕ್‌ಫನ್ನು ಜಾರಿಯಲ್ಲಿರಿಸಲು ಇಚ್ಛಿಸುತ್ತಾರೆಂಬ ಬಗ್ಗೆ ಹೇಳಿಕೆ ನೀಡಬೇಕು.

ನಂತರ ಇಪ್ಪತ್ತು ಇಪ್ಪತ್ತೊಂದು ವರ್ಷ ಪ್ರಾಯದಲ್ಲಿ ವಿದ್ಯಾಭ್ಯಾಸ ಮಾಡಿ ಮುಗಿಸಿದಾಗ ಅವರು ಜಾಮಿಅ ಅಹ್ಮದಿಯಾದಲ್ಲಿ ಪ್ರವೇಶಿಸದೆ ಇದ್ದಲ್ಲಿ ಅವರು ಈ ಬೋಂಡನ್ನು ಪುನಃ ಬರೆಯಬೇಕು. ಯಾರೊಂದಿಗಾದರೂ ಯಾವುದಾದರೂ ವಿಭಾಗದಲ್ಲಿ ಸ್ವಲ್ಪ ತರಬೇತಿ ಪಡೆಯಿರಿ ಎಂದು ನಿರ್ದೇಶಿಸಿದರೆ ಆಗ ಅವರು ಪುನಃ ಬರೆದು ಕೊಡಬೇಕು. ಅಂದರೆ ವಕ್‌ಫ್ ಪದ್ಧತಿಗೆ ಸೇರಿದವರು ಪ್ರತಿಯೊಂದು ಸಂದರ್ಭದಲ್ಲಿ ತನ್ನ ಸ್ವಂತ ಇಷ್ಟ ಪ್ರಕಾರ ತಾನು ವಕ್‌ಫನ್ನು ಸ್ಥಿರ ಪಡಿಸಲು ಇಚ್ಛಿಸುವುದಾಗಿ ಪ್ರಕಟಿಸಬೇಕು. ನಾನು ಇದರ ಬಗ್ಗೆ ಅನೇಕ ಸಾರಿ ಸವಿಸ್ತಾರವಾಗಿ ವಿವರಿಸಿದ್ದೇನೆ. ವಕ್‌ಫೆ ನೌಗೆ ಸೇರಿದ ವ್ಯಕ್ತಿ ಹೀಗೆ ಯೋಚಿಸಬಾರದು: ನಾವು ವಕ್‌ಫ್ ಮಾಡಿದರೆ ಲೌಕಿಕವಾಗಿ ಜೀವಿಸುವುದು ಹೇಗೆ. ನಾವು ತಂದೆ ತಾಯಂದಿರಿಗೆ ಆರ್ಥಿಕವಾಗಿ ಸಹಾಯ ಮಾಡುವುದು ಹೇಗೆ. ಶಾರೀರಿಕವಾಗಿ ಅಥವಾ ಬೇರೆ ರೀತಿ ಸೇವೆ ಮಾಡುವುದು ಹೇಗೆ ಎಂದೆಲ್ಲಾ ಅವರು ಯೋಚಿಸಬಾರದು.

ಹಝ್ರತ್ ಮರ್‌ಯಮರ ತಾಯಿಯ ಪ್ರಾರ್ಥನೆಯಲ್ಲಿ **ಮುಹರ್‌ರನ್** ಎಂಬ ಶಬ್ದ ಬಳಸಲಾಗಿದೆ. ಇದರ ಅರ್ಥ ಇದೇ ಆಗಿದೆ: ನಾನು ಈ ಮಗುವನ್ನು ಎಲ್ಲ ರೀತಿಯ ಲೌಕಿಕ ಹೊಣೆಗಾರಿಕೆಗಳಿಂದ ಮುಕ್ತಳನ್ನಾಗಿ ಮಾಡಿದ್ದೇನೆ. ನಾನು ಪ್ರಾರ್ಥಿಸುವುದೇನೆಂದರೆ ಧಾರ್ಮಿಕ ಕಾರ್ಯಗಳು ಮಾತ್ರ ಅವಳ ಆದ್ಯತೆಗಳಾಗಬೇಕು. ವಕ್‌ಫೇ ನೌ ಮಾಡುವ ತಂದೆ ತಾಯಂದಿರೊಂದಿಗೆ ನಾನು ಮೊತ್ತ ಮೊದಲು ಹೇಳಲು ಬಯಸುವುದೇನೆಂದರೆ ವಕ್‌ಫೇ ನೌ ಎಂಬ ಹೆಸರನ್ನು ಹೊಂದಿದರೆ ಮಾತ್ರ ಸಾಕಾಗಲಾರದು. ವಕ್‌ಫ್ ಎಂದರೆ ಒಂದು ಪ್ರಮುಖ ಹೊಣೆಗಾರಿಕೆಯಾಗಿದೆ. ಒಬ್ಬ ವಕ್‌ಫೇ ನೌ, ಯುವಕನಾಗುವ ತನಕ ಅವನ ತಂದೆ ತಾಯಂದಿರು ಹೊಣೆಗಾರರಾಗಿರುತ್ತಾರೆ. ಅನಂತರ ಅವನ ಸ್ವಂತ ಹೊಣೆಗಾರಿಕೆಯಾಗುತ್ತದೆ. ಲೌಕಿಕ ವಿದ್ಯಾಭ್ಯಾಸ ಗಳಿಸಿದ ಕೆಲವು ಹುಡುಗರು ಮತ್ತು ಹುಡುಗಿಯರು ಬಾಹ್ಯವಾಗಿ ಬಹಳ ಸಂತೋಷದಿಂದ ಮೊದಲು ಸೇವೆ ಸಲ್ಲಿಸುತ್ತಾರೆ. ಆದರೆ ಅನಂತರ ಎಂತಹ ಉದಾಹರಣೆಗಳು ಲಭಿಸುತ್ತಿವೆ ಎಂದರೆ, ಕೆಲವರು ಜಮಾಅತ್ ನೀಡುವ ಎಲವನ್ಸ್‌ನಿಂದ ಅವರಿಗೆ ಜೀವಿಸಲಾಗುವುದಿಲ್ಲ ಎಂದು ಹೇಳಿ ಬಿಟ್ಟು ಬಿಡುತ್ತಾರೆ. ಒಂದು ದೊಡ್ಡ ಉದ್ದೇಶ ಗಳಿಸಲು ಕಷ್ಟ ಅನುಭವಿಸಿ ಬಲಿದಾನ ಮಾಡಬೇಕಾಗುತ್ತದೆ. ವಕ್‌ಫ್ ಮಾಡಿದ ಜೀವಿತಕ್ಕಿಂತ ದೊಡ್ಡದಾದುದು ಬೇರೆ ಯಾವುದೂ ಇಲ್ಲ ಎಂಬ ವಿಚಾರವನ್ನು ಬಾಲ್ಯದಿಂದಲೇ ವಕ್‌ಫ್ ಮಾಡಲ್ಪಟ್ಟವರ ಮನಸ್ಸಿನಲ್ಲಿ ಇರಿಸುತ್ತಿದ್ದರೆ ಅವರು ಲೌಕಿಕವಾಗಿ ಅನ್ಯರ ಕಡೆಗೆ ನೋಡುತ್ತಿರಲಿಲ್ಲ. ನನ್ನ ಸಹಪಾಠಿ ನನ್ನಷ್ಟು ಕಲಿತು ಲಕ್ಷಗಟ್ಟಲೆ ಸಂಪಾದಿಸುತ್ತಾನೆ. ಅವನ ಒಂದು ದಿನದ ಸಂಪಾದನೆ ನಾನು ಒಂದು ತಿಂಗಳು ಗಳಿಸಲಾರೆ ಎಂಬ ಯೋಚನೆಗೆ ಬದಲಾಗಿ ಹೀಗೆ ಯೋಚಿಸಬೇಕು. ನನಗೆ ಅಲ್ಲಾಹನು ನೀಡಿದ ಸ್ಥಾನ ಲೌಕಿಕ ಸಂಪತ್ತಿಗಿಂತ ಬಹಳ ಮಿಗಿಲಾಗಿದೆ ಎಂದು ಯೋಚಿಸಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿರುವರು: ಲೌಕಿಕ ಸಂಗತಿಗಳಿಗೆ ಸಂಬಂಧಿಸಿ ನಿಮಗಿಂತ ಕೆಳ ಮಟ್ಟದವರನ್ನು ನೋಡಿರಿ, ಮತ್ತು ಆಧ್ಯಾತ್ಮಿಕ ಅಭಿವೃದ್ಧಿಗೆ ಸಂಬಂಧಿಸಿ ನಿಮಗಿಂತ ಉನ್ನತ ಪದವಿ ಪಡೆದವರನ್ನು ನೋಡಿರಿ ಎಂಬ ಉಪದೇಶವನ್ನು ನಿಮ್ಮ ಮುಂದಿರಿಸಬೇಕು. ಹೀಗೆ ಮಾಡಿದರೆ ಲೌಕಿಕ ಸ್ಪರ್ಧೆಯಲ್ಲಿ ಓಡುವುದಕ್ಕೆ ಬದಲಾಗಿ ಆಧ್ಯಾತ್ಮಿಕವಾಗಿ ಮುಂದೆ ಸಾಗಲು ಪ್ರಯತ್ನಿಸುವಿರಿ.

ಪ್ರತಿಯೊಬ್ಬ ಅಹ್ಮದಿಯ ಆಧ್ಯಾತ್ಮಿಕ ಮಟ್ಟ ಉನ್ನತವಾಗಬೇಕೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರತೀಕ್ಷಿಸುತ್ತಾರೆ. ಹೀಗಿರುವಾಗ ಯಾರ ತಂದೆ ತಾಯಂದಿರು ಒಬ್ಬನನ್ನು ಅವನ ಜನನಕ್ಕೆ ಮೊದಲು ಧಾರ್ಮಿಕ ಕಾರ್ಯಗಳಿಗೋಸ್ಕರ ವಕ್‌ಫ್ ಮಾಡಿರುವರೋ ಮತ್ತು ಅವನಿಗೋಸ್ಕರ ಪ್ರಾರ್ಥನೆ ಸಹ ಮಾಡಿರುವರೋ ಅವನು ಎಷ್ಟು ಉನ್ನತ ಆಧ್ಯಾತ್ಮಿಕ ಮಟ್ಟವನ್ನು ಗಳಿಸಲು ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ನನ್ನ ಜಮಾಅತಿಗೆ ಹೀಗೆ ಉಪದೇಶ ನೀಡಲು ಬಯಸುತ್ತೇನೆ. ನನ್ನ ಮಾತನ್ನು ಆಲಿಸುವುದು ಮತ್ತು ಆಲಿಸದಿರುವುದು ಪ್ರತಿಯೊಬ್ಬನ ಅಧಿಕಾರಕ್ಕೆ ಸೇರಿದೆ. ಯಾರಾದರೂ ಮೋಕ್ಷ ಬಯಸುವುದಾದರೆ, ಪರಿಶುದ್ಧ ಜೀವಿತ ಮತ್ತು ಶಾಶ್ವತ ಜೀವಿತ ಆಶಿಸುವುದಾದರೆ, ಅವನು ಅಲ್ಲಾಹನಿಗೋಸ್ಕರ ತನ್ನ ಜೀವಿತವನ್ನು ವಕ್‌ಫ್ ಮಾಡಬೇಕು. ನನ್ನ ಜೀವಿತ, ನನ್ನ ಮೃತ್ಯು, ನನ್ನ ಬಲಿದಾನಗಳು, ನನ್ನ ನಮಾಝ್, ಅಲ್ಲಾಹನಿಗೋಸ್ಕರ ಮಾತ್ರವಾಗಿದೆ ಎಂದು ಹೇಳುವ ಮಟ್ಟವನ್ನು ತಲಪಬೇಕು. ಹಝ್ರತ್ ಇಬ್ರಾಹೀಂ ಅಲೈಹಿಸ್ಸಲಾಮರು ಹೇಳಿದ ಹಾಗೆ ಅವನ ಆತ್ಮ ಹೀಗೆ ಹೇಳಬೇಕು. **ಅಸ್‌ಲಮ್‌ತು ಲಿರಬ್ಬಿಲ್ ಆಲಮೀನ್.** ನಾನು ನನ್ನ ಪ್ರಭುವಿನ ಆಜ್ಞೆಗಳನ್ನು ಪಾಲಿಸುವವನಾಗಿದ್ದೇನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಎಲ್ಲಿಯ ತನಕ ಮನುಷ್ಯನು ಅಲ್ಲಾಹನಲ್ಲಿ

ತನ್ನನ್ನು ಅರ್ಪಿಸುವುದಿಲ್ಲವೋ ಮತ್ತು ಅಲ್ಲಾಹನಲ್ಲಿ ಲೀನನಾಗಿ ಮೃತನಾಗುವುದಿಲ್ಲವೋ ಅವನು ನವಜೀವನ ಗಳಿಸಲಾರ. ನನ್ನೊಂದಿಗೆ ಸಂಬಂಧ ಹೊಂದಿದ ನೀವು ನೋಡುತ್ತಿರುವಿರಿ– ಅಲ್ಲಾಹನಿಗೆ ಜೀವಿತವನ್ನು ವಕ್ಫ್ ಮಾಡುವುದರಲ್ಲಿ ನನ್ನ ಜೀವಿತದ ಮೂಲ ಉದ್ದೇಶ ಎಂದು ನಾನು ಭಾವಿಸಿದ್ದೇನೆ. ಆದುದರಿಂದ ನೀವು ನಿಮ್ಮ ಕಡೆಗೆ ನೋಡಿರಿ. ನನ್ನ ಈ ಕೆಲಸವನ್ನು ಇಷ್ಟಪಡುವವರು ನಿಮ್ಮ ಪೈಕಿ ಎಷ್ಟು ಜನರಿದ್ದಾರೆ. ಅಲ್ಲಾಹನಿಗೋಸ್ಕರ ಜೀವಿತವನ್ನು ವಕ್ಫ್ ಮಾಡುವುದನ್ನು ಪ್ರೀತಿಸುವವರು ಎಷ್ಟು ಜನರಿದ್ದಾರೆ.

ಆದುದರಿಂದ ವಾಕಿಫೀನೆ ನೌಗೆ ಸೇರಿದವರು ಸಾಮಾನ್ಯ ಅಹ್ಮದಿಗಿಂತ ಉನ್ನತವಾದ ಸ್ಥಾನ ಗಳಿಸಲು ಪ್ರಯತ್ನ ಮಾಡಬೇಕಾಗಿದೆ. ವಾಕಿಫೀನೆ ನೌ ತಮ್ಮಲ್ಲಿ ಇದ್ದುದರಲ್ಲಿ ತೃಪ್ತಿಪಡುವ ಮನೋಭಾವದ ಮಟ್ಟವನ್ನು ಬಹಳ ಉನ್ನತಗೊಳಿಸಬೇಕು. ಬಲಿದಾನ ಮಾಡುವುದರ ಮಟ್ಟವನ್ನೂ ಉನ್ನತಗೊಳಿಸಬೇಕು. ಅದೇರೀತಿ ತಂದೆ ತಾಯಂದಿರು ಸಹ ವಾಕಿಫೀನ್‌ಗಳ ಜೀವಿತ ಕೀಳೆಂದು ಭಾವಿಸಬಾರದು. ಜೀವಿತವನ್ನು ವಕ್ಫ್ ಮಾಡಿದವರ ಮಟ್ಟ ಮತ್ತು ಸ್ಥಾನ ಬಹಳ ಉನ್ನತವಾಗಿದೆ ಎಂಬ ದೃಷ್ಟಿಕೋನವನ್ನು ಅವರು ಹೊಂದಬೇಕು. ವಾಕಿಫೀನೆ ಝಿಂದಗಿ ತಮ್ಮನ್ನು ಲೋಕದ ಅತ್ಯಂತ ವಿನಯಾನ್ವಿತರೆಂದು ಭಾವಿಸಬೇಕಾಗಿದೆ. ವಾಕಿಫೀನೆ ನೌ ತಮ್ಮ ಬಲಿದಾನಗಳ ಮಟ್ಟವನ್ನು ವರ್ಧಿಸಬೇಕಲ್ಲದೆ ತಮ್ಮ ಆರಾಧನೆಯ ಮಟ್ಟವನ್ನೂ ಉನ್ನತಗೊಳಿಸಬೇಕು. ತಮ್ಮ ನಿಷ್ಠೆಯ ಮಟ್ಟವನ್ನೂ ವರ್ಧಿಸಬೇಕು. ತಮ್ಮ ಮತ್ತು ತಮ್ಮ ತಂದೆ ತಾಯಿಯ ಪ್ರತಿಜ್ಞೆ ಈಡೇರಿಸಲು ತಮ್ಮ ಎಲ್ಲ ಶಕ್ತಿಸಾಮರ್ಥ್ಯಗಳನ್ನು ಬಳಸಿ ಪ್ರಯತ್ನಿಸಬೇಕು. ಧಾರ್ಮಿಕ ಕಾರ್ಯಗಳಿಗೋಸ್ಕರ ಹಾಗೂ ಧರ್ಮದ ಉನ್ನತಿಗೋಸ್ಕರ ಕೆಲಸ ಮಾಡಲು ಪ್ರಯತ್ನಿಸಬೇಕು. ಆಗ ಅಲ್ಲಾಹನು ಅನುಗ್ರಹ ನೀಡುತ್ತಾನೆ. ಯಾರಿಗೂ ಅಲ್ಲಾಹನು ಪ್ರತಿಫಲ ನೀಡದೆ ಇರುವುದಿಲ್ಲ.

ತಮ್ಮ ಪ್ರತಿಜ್ಞೆಗಳನ್ನು ನಿಷ್ಠೆಯಿಂದ ಈಡೇರಿಸುವ ಬಗ್ಗೆ ಉಪದೇಶ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದೆಡೆ ಈ ರೀತಿ ಹೇಳಿದರು: ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರನ್ನು ಹೊಗಳಿ ಹೇಳಿದ್ದಾನೆ. **ವ ಇಬ್ರಾಹೀಮಲ್ಲಝೀ ವಫ್ಫಾ.** ಎಂದರೆ ಅವರು ತನ್ನ ಪ್ರತಿಜ್ಞೆಯನ್ನು ಈಡೇರಿಸಿದರು ಎಂದು. ಆದುದರಿಂದ ಪ್ರತಿಜ್ಞೆ ಈಡೇರಿಸುವುದು ಸಾಮಾನ್ಯ ವಿಷಯವೇನೂ ಅಲ್ಲ. ವಕ್ಫೇ ಝಿಂದಗಿ ಮಾಡುವ ಪ್ರತಿಜ್ಞೆ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತು ನಾವು ಆಲಿಸಿದೆವು. ಪ್ರತಿಯೊಬ್ಬ ವಕ್ಫೆ ನೌ ಹುಡುಗ ಮತ್ತು ಹುಡುಗಿ ತಿಳಿಯಬೇಕು ಅವರು ತಮ್ಮ ಪ್ರತಿಜ್ಞೆಯನ್ನು ನಿಷ್ಠೆಯಿಂದ ಈಡೇರಿಸುವುದಾದರೆ ನಾವು ಲೋಕದಲ್ಲಿ ಒಂದು ಕ್ರಾಂತಿಯನ್ನು ಮಾಡಬಲ್ಲೆವು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಅಲ್ಲಾಹನೊಂದಿಗೆ ನಿಷ್ಠೆ ಮತ್ತು ಸತ್ಯ ತೋರಿಸಲು ಒಂದು ಮೃತ್ಯು ಆವಶ್ಯಕವಾಗಿದೆ. ಮನುಷ್ಯನು ಲೌಕಿಕ ಆಸಕ್ತಿಗಳ ಮೇಲೆ ಮತ್ತು ವೈಭವಗಳ ಮೇಲೆ ನೀರು ಚೆಲ್ಲಲು ಎಲ್ಲಿಯ ತನಕ ಸಿದ್ಧನಾಗುವುದಿಲ್ಲವೋ, ಪ್ರತಿಯೊಂದು ಅಪಮಾನ ಮತ್ತು ಕಷ್ಟವನ್ನು ಅಲ್ಲಾಹನಿಗೋಸ್ಕರ ಅನುಭವಿಸಲು ಸಿದ್ಧನಾಗುವುದಿಲ್ಲವೋ ಅಲ್ಲಿಯ ತನಕ ಈ ಗುಣ ಗಳಿಸಲು ಸಾಧ್ಯವಾಗದು. ಅಲ್ಲಾಹನ ಸಾಮೀಪ್ಯವನ್ನು ತಡೆಯುವ ಮತ್ತು ಅದಕ್ಕಿಂತ ಆದ್ಯತೆ ಪಡೆಯುವ ಪ್ರತಿಯೊಂದು ವಸ್ತು ಒಂದು ವಿಗ್ರಹವಾಗಿದೆ. ಮನುಷ್ಯನು ತನ್ನೊಳಗೆ ಎಷ್ಟು ವಿಗ್ರಹವಿರಿಸಿದ್ದಾನೆ ಎಂದು ಅವನಿಗೆ ತಿಳಿದಿರುವುದಿಲ್ಲ. ಅವನಿಗೆ ತಾನು ವಿಗ್ರಹಾರಾಧನೆ ಮಾಡುತ್ತಿರುವುದು ತಿಳಿದಿರುವುದಿಲ್ಲ. ಇಂದಿನ ಕಾಲದಲ್ಲಿ ನಾಟಕಗಳು ವಿಗ್ರಹಗಳಾಗಿವೆ. ಇಂಟರ್‌ನೆಟ್ ಕೂಡ ವಿಗ್ರಹಗಳ ರೂಪ ತಳೆದಿದೆ. ಲೌಕಿಕ ಸಂಪಾದನೆ ವಿಗ್ರಹವಾಗಿದೆ. ಬೇರೆ ಆಶೆಗಳು ಸಹ ವಿಗ್ರಹಗಳಾಗಿವೆ.

ಇಬ್ರಾಹೀಮ್ ಅಲೈಹಿಸ್ಸಲಾಮರಿಗೆ ದೊರೆತ ಪದವಿ ಸುಮ್ಮನೆ ದೊರೆತುದಲ್ಲ. ಅವರು ತಮ್ಮ ಮಗನನ್ನು ಬಲಿದಾನ ಮಾಡಲು ಸಿದ್ಧರಾದಾಗ **ಇಬ್ರಾಹೀಮಲ್ಲಝೀ ವಫ್ಫಾ** ಎಂಬ ಶಬ್ದ ಕೇಳಿಸಿತು. ಅಲ್ಲಾಹನು ಕೆಲಸವನ್ನು ಇಷ್ಟಪಡುತ್ತಾನೆ. ಕೆಲಸದಿಂದಲೇ ಅವನು ತೃಪ್ತನಾಗುತ್ತಾನೆ. ಕೆಲಸ ಕಷ್ಟಪಟ್ಟು ಮಾಡಲಾಗುತ್ತದೆ. ಎಂದರೆ ಮನುಷ್ಯನು ಒಳ್ಳೆಯ ಕೆಲಸ ಮಾಡಲು, ಅಲ್ಲಾಹನ ಸಂಪ್ರೀತಿ ಗಳಿಸುವ ಕೆಲಸ ಮಾಡಲು ಬಲಿದಾನ ನೀಡ ಬೇಕಾಗುತ್ತದೆ. ತನ್ನನ್ನು ಕಷ್ಟಕ್ಕೆ ಗುರಿಪಡಿಸಬೇಕಾಗುತ್ತದೆ. ಆದರೆ ಮನುಷ್ಯನು ಅಲ್ಲಾಹನಿಗೋಸ್ಕರ ಕಷ್ಟಪಡಲು ಸಿದ್ಧನಾಗುವಾಗ ಅಲ್ಲಾಹನು ಅವನನ್ನು ಕಷ್ಟಕ್ಕೆ ಗುರಿಪಡಿಸುವುದಿಲ್ಲ. ಇಬ್ರಾಹೀಮ್ ಅಲೈಹಿಸ್ಸಲಾಮ್ ಅಲ್ಲಾಹನ ಆಜ್ಞೆ ಈಡೇರಿಸಲು ತನ್ನ ಮಗನನ್ನು ಬಲಿಯರ್ಪಿಸಲು ಸಿದ್ಧರಾದಾಗ ಅಲ್ಲಾಹನು ಅವರ ಮಗನನ್ನು ರಕ್ಷಿಸಿದನು. ಮಗನನ್ನು ಬಲಿದಾನ ನೀಡುವ ಮೂಲಕ ತಂದೆಗೆ ಉಂಟಾಗುವ ದುಃಖ ಸಹ ನಿವಾರಣೆಯಾಯಿತು. ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮರು ಅಗ್ನಿಗೆ ಹಾಕಲ್ಪಟ್ಟರು. ಆದರೆ ಅಗ್ನಿಗೆ ಅವರ ಮೇಲೆ ಯಾವ ಪ್ರಭಾವವನ್ನೂ ಬೀರಲು ಸಾಧ್ಯವಾಗಲಿಲ್ಲ. ಆದುದರಿಂದ ಅಲ್ಲಾಹನ ಮಾರ್ಗದಲ್ಲಿ ಕಷ್ಟ ಅನುಭವಿಸಲು ಮನುಷ್ಯನು ಸಿದ್ಧನಾಗುವಾಗ ಅಲ್ಲಾಹನು ಕಷ್ಟದಿಂದ ಅವರನ್ನು ರಕ್ಷಿಸುತ್ತಾನೆ.

ಅಲ್ಲಾಹನ ಪ್ರೀತಿ ಮತ್ತು ಅವನ ಅನುಗ್ರಹಗಳನ್ನು ಗಳಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಮುಂದೆ ಇರಿಸಿದ ಕರ್ಮದ ಮಟ್ಟ ಇದಾಗಿದ್ದು ಅವರು ಅದನ್ನು ನಮ್ಮಿಂದ ಪ್ರತೀಕ್ಷಿಸುತ್ತಾ ಇದ್ದಾರೆ. ಪ್ರತಿಯೊಬ್ಬ ವಾಕಿಫೆ ನೌ ಈ ಮಟ್ಟವನ್ನು ತಲಪಲು ಪ್ರಯತ್ನಿಸಬೇಕು. ಮತ್ತು ಪ್ರತಿಯೊಬ್ಬ ವಾಕಿಫೆ ನೌ ನೆನಪಿಡಬೇಕಾದುದು ಏನೆಂದರೆ ಬಲಿದಾನದ ಮಟ್ಟ ವರ್ಧಿಸದಿದ್ದರೆ ನಾವು ಜೀವಿತ ವಕ್ಫ್ ಮಾಡಿದ್ದೇವೆ ಎಂಬ ವಾದ ಕೇವಲ ಮೇಲಿಂದ ಮೇಲೆ ಮಾಡುವ ವಾದ ಮಾತ್ರವಾಗಿದೆ. ಕೆಲವು ತಾಯಂದಿರು ಹೇಳುತ್ತಾರೆ. ನಾವು ಕೆನಡಕ್ಕೆ ಬಂದಿದ್ದೇವೆ. ನಮ್ಮ ಮಗ ಪಾಕಿಸ್ಥಾನದಲ್ಲಿ ಮುರಬ್ಬಿಯಾಗಿದ್ದಾನೆ. ಅಥವಾ ವಕ್ಫೇ ಝಿಂದಗೀ ಮಾಡಿದವನಾಗಿದ್ದಾನೆ. ಅವನನ್ನು ಇಲ್ಲಿಗೆ ಕರೆಸಿ ಇಲ್ಲಿಯೇ ಅವನನ್ನು ಕೆಲಸಕ್ಕೆ ನೇಮಿಸಿರಿ. ಅವನು ನಮ್ಮ ಬಳಿಗೆ ಬರಲಿ ಎಂದು ಹೇಳುತ್ತಾರೆ. ಆದರೆ ಒಬ್ಬನು ತನ್ನ

ಜೀವಿತವನ್ನು ವಕ್ಫ್ ಮಾಡಿರುವಾಗ ಇಂತಹ ಬೇಡಿಕೆಗಳನ್ನು ಮುಂದಿರಿಸಬಾರದು. ಇಂತಹ ಆಶೆಗಳು ಇರಲು ಹೇಗೆ ತಾನೆ ಸಾಧ್ಯ? ಅಂತಹ ಆಶೆಗಳು ಕೊನೆಗೊಂಡಿವೆ.

ನಾನು ಹಿಂದೆ ಹೇಳಿದ ಹಾಗೆ ವಾಕಿಫೀನೆ ನೌನಲ್ಲಿ ಮಕ್ಕಳನ್ನು ಸೇರಿಸುವ ಆಸಕ್ತಿ ವರ್ಧಿಸಿದೆ. ಇದು ಬಹಳ ಉತ್ತಮವೇ ಆಗಿದೆ. ಆದರೆ ಈ ಆಸಕ್ತಿಯನ್ನು ಅಲ್ಲಾಹನ ತೃಪ್ತಿಯನ್ನು ಆಶಿಸುತ್ತಾ ಮಾತ್ರ ವರ್ಧಿಸಿರಿ. ಪರಿಸ್ಥಿತಿ ಬದಲಾಗುವಾಗ ನಿಮ್ಮ ಪ್ರತಿಜ್ಞೆಗಳನ್ನು ಬಲಹೀನಗೊಳಿಸುವವರಾಗಿ ಅಥವಾ ಮುರಿಯುವವರಾಗಿ ಆಗಬೇಡಿರಿ. ಪರಿಸ್ಥಿತಿ ಬದಲಾಗಿದ್ದರೆ ಅದನ್ನು ಸಹಿಸಬೇಕು. ಎಲ್ಲಾ ವಾಕಿಫೆ ಝಿಂದಗಿಗಳು ಮತ್ತು ಅವರ ತಂದೆ ತಾಯಂದಿರು ವಕ್ಫ್ ಎಂದರೇನೆಂದೂ ಅದರ ವಾಸ್ತವಿಕತೆ ಏನೆಂದೂ ಅರಿತುಕೊಂಡು ತಮ್ಮ ಪ್ರತಿಜ್ಞೆಗಳನ್ನು ಈಡೇರಿಸುವವರಾಗಬೇಕು. ಅವರು ತಮ್ಮ ನಿಷ್ಠೆಯ ಮಟ್ಟವನ್ನು ಉನ್ನತಗೊಳಿಸುತ್ತಾ ಹೋಗುವವರಾಗಬೇಕು.

ಆಡಳಿತೆಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ಮತ್ತು ವಾಕಿಫೀನ್‌ಗಳ ಕಾರ್ಯಸೂಚಿಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಕೆಲವು ಜನರು ಕೇಳುತ್ತಾರೆ. ಅಥವಾ ಕೆಲವು ವಾಕಿಫೀನ್‌ಗಳ ಮನಸ್ಸಿನಲ್ಲಿ ತಪ್ಪು ಗ್ರಹಿಕೆಗಳಿವೆ. ವಕ್ಫೇ ನೌಗೆ ಸೇರಿ ಅವರಿಗೆ ಪ್ರತ್ಯೇಕವಾದೊಂದು ಪರಿಗಣನೆ ದೊರೆತಿದೆ ಎಂದು. ಅವರಿಗೆ ನಿಶ್ಚಯವಾಗಿಯೂ ಒಂದು ಪ್ರತ್ಯೇಕ ಪರಿಗಣನೆ ಇದೆ. ಆದರೆ ಅದರ ಅರ್ಥ ಅವರೊಂದಿಗೆ ವ್ಯತ್ಯಸ್ಥವಾದ ರೀತಿಯಲ್ಲಿ ವರ್ತಿಸಲಾಗುವುದು ಎಂದಲ್ಲ. ಅವರು ಈ ಗುರುತನ್ನು ಹೊಂದಿ ತಮ್ಮ ಬಲಿದಾನಗಳ ಮಟ್ಟವನ್ನು ವರ್ಧಿಸಬೇಕು. ಕೆಲವು ಜನರು ತಮ್ಮ ವಾಕಿಫೀನೆ ನೌ ಮಕ್ಕಳ ತಲೆಯಲ್ಲಿ ಈ ಮಾತನ್ನು ತುಂಬಿಸುತ್ತಾರೆ. ನೀವು ಬಹಳ ಸ್ಪೆಷಲ್ ಆಗಿರುವ ಮಕ್ಕಳಾಗಿದ್ದೀರಿ ಎಂದು. ಇದರ ಪರಿಣಾಮವಾಗಿ ಅವರು ದೊಡ್ಡವರಾದಾಗ ತಾವು ಸ್ಪೆಷಲ್ ಜನರೆಂದು ಭಾವಿಸುತ್ತಾರೆ. ಅವರು ವಕ್ಫ್ ಮಾಡಿದ ಉದ್ದೇಶವನ್ನು ಮರೆತು ಬಿಡುತ್ತಾರೆ. ಅವರು ವಕ್ಫೇ ನೌ ಎಂಬ ಪ್ರಶಸ್ತಿಯನ್ನು ತಮ್ಮ ಜೀವಿತದ ಉದ್ದೇಶವಾಗಿ ಭಾವಿಸುತ್ತಾರೆ. ಕೆಲವರ ಮನಸ್ಸಿನಲ್ಲಿ ನಾವು ವಕ್ಫೇ ನೌಗೆ ಸೇರಿದವರಾದ ಕಾರಣ ನಾವು ನಾಸಿರಾತ್, ಲಜ್ನ, ಅತ್‌ಫಾಲ್, ಖುದ್ದಾಮ್‌ಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಆವಶ್ಯಕತೆ ಇಲ್ಲ. ನಮ್ಮ ವ್ಯವಸ್ಥೆ ಬೇರೆಯೇ ಆಗಿದೆ ಎಂಬ ಭಾವನೆ ಇದೆ. ಇದು ಸಂಪೂರ್ಣ ತಪ್ಪು ಕಲ್ಪನೆಯಾಗಿದೆ. ಜಮಾಅತಿನ ಪ್ರತಿಯೊಬ್ಬ ಹುದ್ದೇದಾರ, ಅಮೀರ್ ಸಮೇತ, ತನ್ನ ಪ್ರಾಯಕ್ಕೆ ಅನುಸರಿಸಿ ಸಂಬಂಧಿತ ಉಪ ಸಂಘಟನೆಗಳ ಸದಸ್ಯನಾಗುತ್ತಾನೆ. ಆದುದರಿಂದ ಪ್ರತಿಯೊಬ್ಬ ವಾಕಿಫೆ ನೌ ಹುಡುಗ ಮತ್ತು ಹುಡುಗಿ ನೆನಪಿನಲ್ಲಿಡಬೇಕಾದುದೇನೆಂದರೆ ತಾವು ತಮಗೆ ಸಂಬಂಧಿಸಿದ ಉಪ ಸಂಘಟನೆಗಳಲ್ಲಿ ತಮ್ಮ ಪ್ರಾಯಕ್ಕೆ ಅನುಸಾರವಾಗಿ ಸದಸ್ಯರಾಗಬೇಕಾಗಿದೆ. ಅವರ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಆವಶ್ಯಕವಾಗಿದೆ. ಹೀಗೆ ಭಾಗವಹಿಸದವರ ಬಗ್ಗೆ ಸಂಬಂಧಿತ ಸಂಘಟನೆಗಳ ಅಧ್ಯಕ್ಷರು ಕೇಂದ್ರಕ್ಕೆ ವರದಿ ಕಳುಹಿಸಬೇಕು. ಅವರು ತಮ್ಮ ನಡತೆಯನ್ನು ಸುಧಾರಣೆ ಮಾಡುವುದಿಲ್ಲವಾದರೆ ಅವರನ್ನು ವಕ್ಫೇ ನೌ ಪದ್ಧತಿಯಿಂದ ಹೊರಗೆ ಹಾಕಲಾಗುವುದು. ಆದರೆ ಜಮಾಅತಿನ ಕಾರ್ಯಕ್ರಮಗಳು ಇದ್ದರೆ, ಅದೇ ಸಮಯದಲ್ಲಿ ವಕ್ಫೇ ನೌಗಳ ಕಾರ್ಯಕ್ರಮಗಳು ಸಹ ಇದ್ದರೆ ಮತ್ತು ಅಧೀನ ಸಂಘಟನೆಗಳ ಕಾರ್ಯಕ್ರಮಗಳು ಇದ್ದರೆ, ಅವು ಪರಸ್ಪರ ಸಮಾಲೋಚಿಸಿ, ಸಮಯದಲ್ಲಿ ವ್ಯತ್ಯಾಸ ಮಾಡಿಕೊಂಡು, ಪರಸ್ಪರ ಸಂಘರ್ಷ ಉಂಟಾಗದಂತೆ ನೋಡಿಕೊಳ್ಳಬೇಕಾಗಿದೆ.

ವಕ್ಫೇ ನೌಗೆ ಸೇರಿದವರು ಸ್ಪೆಷಲ್, ಎಂದರೆ ವಿಶಿಷ್ಟ ವ್ಯಕ್ತಿತ್ವ ಹೊಂದಬೇಕು. ಆದರೆ ಅವರು ಸ್ಪೆಷಲ್ ವ್ಯಕ್ತಿತ್ವ ಹೊಂದುವವರಾಗಲು ಅವರು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿ ಅನ್ಯರಿಗಿಂತ ಮುಂದೆ ಇರಬೇಕು. ಆಗ ಅವರು ಸ್ಪೆಷಲ್ ಎಂದು ಗಣಿಸಲ್ಪಡುವರು. ಅವರು ಅಲ್ಲಾಹನನ್ನು ಇತರರಿಗಿಂತ ಹೆಚ್ಚು ಭಯಪಡುವವರಾಗಬೇಕು. ಅವರ ಆರಾಧನೆಯ ಮಟ್ಟ ಇತರರಿಗಿಂತ ಉನ್ನತವಾಗಿರಬೇಕು. ಅವರು ಫರ್ಝ್ ನಮಾಝ್‌ಗಳೊಂದಿಗೆ ನಫ್ಲ್ ನಮಾಝ್‌ಗಳನ್ನು ಸಹ ಅನುಷ್ಠಿಸುವವರಾಗಬೇಕು. ಅವರ ಸ್ವಭಾವ ಗುಣಗಳ ಮಟ್ಟ ಅತ್ಯಂತ ಉನ್ನತವಾಗಿರಬೇಕು. ಅವರು ಹೀಗೆ ಆದರೆ ಅವರು ಸ್ಪೆಷಲ್ ಜನರಾಗುತ್ತಾರೆ. ಅದು ಅವರ ಸ್ಪೆಷಾಲಿಟಿಯ ಚಿಹ್ನೆ ಆಗುತ್ತದೆ. ಅವರ ಮಾತುಕತೆ ಅನ್ಯರಿಗೆ ಹೋಲಿಸಿದರೆ ಬಹಳ ವ್ಯತ್ಯಾಸವಾಗಿದೆ ಎಂದು ಕಾಣಬೇಕು. ಅವರು ವಿಶಿಷ್ಟ ತರಬೇತಿ ಗಳಿಸಿ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರೆಂದು ಸಾಬೀತಾಗಬೇಕು. ಆಗ ಅವರು ಸ್ಪೆಷಲ್ ಜನರಾಗುತ್ತಾರೆ. ವಕ್ಫೆ ನೌ ಹುಡುಗಿಯರ ಪೋಷಾಕು ಸರಿಯಾಗಿ ಇಸ್ಲಾಮೀ ರೀತಿಯ ಪರದೆಯನ್ನು ಧರಿಸುವುದಾಗಿರಬೇಕು. ಅವರ ಮಾದರಿಯನ್ನು ಕಂಡು ಅನ್ಯರು ಸಹ ಆಕರ್ಷಿಸಲ್ಪಡುವ ರೀತಿಯಲ್ಲಿರಬೇಕು. ಈ ಹುಡುಗಿಯರು ಇಲ್ಲಿನ ಪರಿಸರದಲ್ಲಿ ಜೀವಿಸುತ್ತಿರುವಾಗಲೂ ಇಸ್ಲಾಮೀ ಪರದೆ ಅನುಸರಿಸುವವರಾಗಿದ್ದಾರೆ ಎಂದು ಅನ್ಯರು ಹೇಳುವಂತಿರಬೇಕು. ಹುಡುಗರ ದೃಷ್ಟಿ ಲಜ್ಜೆಯಿಂದ ಕೆಳಗೆ ಬಾಗಿರಬೇಕು. ಅವರು ಆಚೆ ಈಚೆ ತಪ್ಪು ದೃಷ್ಟಿ ಬೀರುವವರಾಗಬಾರದು. ಇಂಟರ್‌ನೆಟ್ ಮೊದಲಾದವುಗಳಲ್ಲಿ ನಿರರ್ಥಕ ವಿಷಯಗಳನ್ನು ನೋಡುವುದಕ್ಕೆ ಬದಲಾಗಿ ಅವರು ಧಾರ್ಮಿಕ ಜ್ಞಾನ ಗಳಿಸಲು ಸಮಯವನ್ನು ವಿನಿಯೋಗಿಸುವವರಾಗಬೇಕು. ಹುಡುಗರ ಪೋಷಾಕು ಅವರನ್ನು ಅನ್ಯರಿಂದ ವ್ಯತ್ಯಸ್ಥರಾಗಿ ತೋರಿಸುವಂತಿರಬೇಕು. ಅವರು ಪ್ರತಿದಿನ ಪವಿತ್ರ ಖುರ್‌ಆನ್ ಓದುವವರಾಗಬೇಕು. ಅದರಲ್ಲಿರುವ ಆಜ್ಞೆಗಳನ್ನು ಹುಡುಕಿ ಅವುಗಳನ್ನು ಪಾಲಿಸುವವರಾಗಬೇಕು. ಆಗ ವಕ್ಫೇ ನೌ ಹುಡುಗ ಹುಡುಗಿಯರು ಸ್ಪೆಷಲ್ ಎಂದು ಕರೆಯಲ್ಪಡಲು ಅರ್ಹರಾಗುತ್ತಾರೆ. ಅವರು ಜಮಾಅತಿನ ಕಾರ್ಯಕ್ರಮಗಳಲ್ಲಿ ಮತ್ತು ಅಧೀನ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಇತರರಿಗಿಂತ ಹೆಚ್ಚಾಗಿ ಮತ್ತು ಸ್ಥಿರವಾಗಿ ಭಾಗವಹಿಸುವವರಾಗಬೇಕು. ಅವರು ತಂದೆ ತಾಯಂದಿರೊಂದಿಗೆ ಉತ್ತಮವಾಗಿ ವರ್ತಿಸುವವರೂ ಅವರಿಗೋಸ್ಕರ ಪ್ರಾರ್ಥನೆ ಮಾಡುವುದರಲ್ಲಿ ತಮ್ಮ ಇತರ ಸಹೋದರರಿಗಿಂತ ಮುಂದಾಗಿರುವವರಾಗಬೇಕು. ಅವರು ವಿವಾಹ ಸಂಬಂಧ ಸ್ಥಾಪಿಸುವಾಗ ಹುಡುಗನೂ ಹುಡುಗಿಯೂ

ಲೌಕಿಕ ಸ್ಥಿತಿ ನೋಡುವುದಕ್ಕೆ ಬದಲಾಗಿ ಧರ್ಮದ ಸ್ಥಿತಿಯನ್ನು ನೋಡುವವರಾಗಬೇಕು. ಅವರು ವಿವಾಹ ಸಂಬಂಧವನ್ನು ಚೆನ್ನಾಗಿ ನಿರ್ವಹಿಸುವವರೂ ಆಗಬೇಕು. ಆಗ ಅವರು ಹೇಳಬಹುದು: ನಾವು ಧಾರ್ಮಿಕ ಮಾರ್ಗದರ್ಶನಗಳನ್ನು ಮಾತ್ರ ಅನುಸರಿಸಿ ನಮ್ಮ ಸಂಬಂಧವನ್ನು ನಿಭಾಯಿಸುವವರಾಗಿದ್ದೇವೆ ಎಂದು. ಆಗ ಅವರು ಸ್ಪೆಷಲ್ ಜನರು ಎಂದು ಕರೆಯಲ್ಪಡುವರು. ಅವರಲ್ಲಿ ಸಹನೆಯ ಗುಣ ಇತರರಿಗಿಂತ ಹೆಚ್ಚಿಗೆ ಇದ್ದರೆ, ಅವರು ಜಗಳ, ಪಿತೂರಿ ಮೊದಲಾದವುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವವರಾದರೆ, ಅವರು ಸೌಹಾರ್ಧವನ್ನು ಸ್ಥಾಪಿಸುವವರಾದರೆ, ಆಗ ಅವರು ಸ್ಪೆಷಲ್ ಆಗುತ್ತಾರೆ. ಅವರು ತಬ್ಲೀಗ್ ಮೈದಾನದಲ್ಲಿ ಎಲ್ಲರಿಗಿಂತ ಮುಂದಾಗಿ ತಮ್ಮ ಕರ್ತವ್ಯ ನಿರ್ವಹಿಸುವವರಾಗಬೇಕು. ಆಗ ಅವರು ಸ್ಪೆಷಲ್ ಆಗುತ್ತಾರೆ. ಅವರು ಖಿಲಾಫತನ್ನು ಅನುಸರಿಸುವವರೂ ತೀರ್ಮಾನಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಪ್ರಥಮ ಶ್ರೇಣಿಯಲ್ಲಿರುವವರೂ, ಇತರರಿಗಿಂತ ಹೆಚ್ಚು ಬಲಿದಾನ ಮಾಡುವವರೂ ವಿನಯದಲ್ಲಿ ಮತ್ತು ನಿಸ್ವಾರ್ಥತೆಯಲ್ಲಿ ಎಲ್ಲರಿಗಿಂತ ಮುಂದೆ ಇರುವವರೂ ದುರಹಂಕಾರ ಮತ್ತು ತಾತ್ಸಾರ ಭಾವನೆ ವಿರುದ್ಧ ಜಿಹಾದ್ ಮಾಡುವವರೂ ಆಗಿದ್ದರೆ ಅವರು ಬಹಳ ಸ್ಪೆಷಲ್ ಆಗುತ್ತಾರೆ. ಎಂ.ಟಿ.ಎ.ದಲ್ಲಿ ನನ್ನ ಖುತ್‌ಬ ಆಲಿಸುವವರಾದರೆ ಮತ್ತು ನನ್ನ ಪ್ರತಿಯೊಂದು ಕಾರ್ಯಕ್ರಮವನ್ನು ನೋಡುವವರಾದರೆ ಮತ್ತು ಅವುಗಳಿಂದ ಮಾರ್ಗದರ್ಶನ ಗಳಿಸುತ್ತಾ ಇದ್ದರೆ ಅವರು ಬಹಳ ದೊಡ್ಡ ಸ್ಪೆಷಲ್ ಮನುಷ್ಯರಾಗುತ್ತಾರೆ. ಹೀಗೆ ಅಲ್ಲದಿದ್ದರೆ ನಿಮ್ಮ ಮತ್ತು ಅನ್ಯರ ಮಧ್ಯೆ ಯಾವ ವ್ಯತ್ಯಾಸವೂ ಇರುವುದಿಲ್ಲ. ಹೀಗೆ ಅಲ್ಲವಾದರೆ ನಿಮ್ಮನ್ನು ಮಾದರಿಯಾಗಿ ಲೋಕ ಕಾಣುವುದಿಲ್ಲವಾದರೆ, ನೀವು ಸ್ಪೆಷಲ್ ಆಗಲಾರಿರಿ. ನೀವು ನಿಮ್ಮ ಪ್ರತಿಜ್ಞೆ ನೆರವೇರಿಸದ ಕಾರಣ, ನಿಮ್ಮ ನಿಷ್ಠೆಯನ್ನು ವರ್ಧಿಸದ ಕಾರಣ, ನೀವು ನಿಷ್ಠಾಹೀನರಾಗಿಯೂ ಪ್ರತಿಜ್ಞೆಯನ್ನು ಉಲ್ಲಂಘಿಸುವವರಾಗಿಯೂ ಅಲ್ಲಾಹನ ಸನ್ನಿಧಿಯಲ್ಲಿ ಗಣಿಸಲ್ಪಡುವಿರಿ.

ಆದುದರಿಂದ ತರಬೇತಿಯ ಕಾಲದಲ್ಲಿ ತಂದೆ ತಾಯಂದಿರು ತಮ್ಮ ಮಕ್ಕಳನ್ನು ಈ ರೀತಿ ಸ್ಪೆಷಲ್ ಆಗಿ ಪರಿವರ್ತಿಸಲು ಹೊಣೆಗಾರರಾಗಿದ್ದಾರೆ. ಧಾರ್ಮಿಕ ವಿದ್ಯಾಭ್ಯಾಸ ಮಾಡುವಾಗ, ಮತ್ತು ಲೌಕಿಕ ವಿದ್ಯಾಭ್ಯಾಸ ಮಾಡುವಾಗ, ವಿವಿಧ ಘಟ್ಟಗಳಲ್ಲಿ ದಾಟಿ ಹೋಗುವಾಗ ವಾಕಿಫೀನೆ ನೌ ಜಮಾಅತ್‌ನೊಂದಿಗೆ ವಿಚಾರಿಸಬೇಕು ನಾವು ಯಾವ ಮಾರ್ಗದಲ್ಲಿ ಹೋಗಬೇಕೆಂದು. ಅಲ್ಲದೆ ಅವರು ಸ್ವತಃ ತೀರ್ಮಾನ ಮಾಡಬಾರದು. ಹುಡುಗರು ಜಾಮಿಅಕ್ಕೆ ಪ್ರವೇಶಿಸಿ ಮುರಬ್ಬಿ ಮತ್ತು ಮುಬಲ್ಲಿಗ್ ಆಗುವ ಬಗ್ಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕು. ಈಗ ಇಂತಹ ಜನರ ಆವಶ್ಯಕತೆ ಬಹಳ ಹೆಚ್ಚಿಗೆ ಇದೆ. ಅಲ್ಲಾಹನ ಅನುಗ್ರಹದಿಂದ ಜಮಾಅತ್ ಹರಡುತ್ತಾ ಇದೆ. ಜಮಾಅತ್ ಸ್ಥಾಪಿತವಾಗಿ ಧೀರ್ಘಕಾಲ ದಾಟಿ ಹೋದ ದೇಶಗಳಲ್ಲಿ ಮಾತ್ರವಲ್ಲ ಹೊಸ ಹೊಸ ದೇಶಗಳಲ್ಲಿ ಸಹ ಅಲ್ಲಾಹನು ಹೊಸ ಜಮಾಅತ್‌ಗಳನ್ನು ಸ್ಥಾಪಿಸುವಂತೆ ಅನುಗ್ರಹಿಸಿದ್ದಾನೆ. ನಮಗೆ ಪ್ರತಿಯೊಂದು ದೇಶದಲ್ಲಿ ಅಸಂಖ್ಯಾತ ಮುರಬ್ಬಿಗಳ ಮತ್ತು ಮುಬಲ್ಲಿಗರ ಆವಶ್ಯಕತೆ ಇದೆ. ನಮ್ಮ ಆಸ್ಪತ್ರೆಗಳಿಗೆ ಡಾಕ್ಟರ್‌ಗಳ ಆವಶ್ಯಕತೆ ಇದೆ. ಖಾದಿಯಾನ್‌ನಲ್ಲಿ ಸಹ ಆಸ್ಪತ್ರೆಯಲ್ಲಿ ಡಾಕ್ಟರ್‌ಗಳ ಆವಶ್ಯಕತೆ ಇದೆ. ಇಲ್ಲಿನವರು ಹೋಗಲು ಸಾಧ್ಯವಿಲ್ಲವಾದರೆ, ನನ್ನ ಖುತ್‌ಬ ಆಲಿಸುವ ವಿವಿಧ ದೇಶಗಳ ವಾಕಿಫೀನೆ ನೌ ಇದರ ಕಡೆಗೆ ಗಮನ ಹರಿಸಬೇಕು. ತಜ್ಞ ಡಾಕ್ಟರ್‌ಗಳ ಆವಶ್ಯಕತೆ ಇದೆ. ತಜ್ಞ ಡಾಕ್ಟರ್‌ಗಳ ಕೊರತೆ ಬಹಳ ಇದೆ. ಆಫ್ರಿಕದಲ್ಲಿ ಸಹ ಡಾಕ್ಟರ್‌ಗಳ ಆವಶ್ಯಕತೆ ಇದೆ. ಜಮಾಅತ್ ಹರಡುತ್ತಾ ಹೋಗುವ ಹಾಗೆ ಈ ಆವಶ್ಯಕತೆಗಳು ಸಹ ಹೆಚ್ಚುತ್ತಾ ಹೋಗುತ್ತವೆ. ಆದುದರಿಂದ ವಿವಿಧ ವಿಭಾಗಗಳಲ್ಲಿ ಪ್ರಾವೀಣ್ಯತೆ ಗಳಿಸಿ ಈ ದೇಶಗಳಲ್ಲಿ ವಿದ್ಯಾಭ್ಯಾಸ ಮಾಡಿ ಮತ್ತು ಅನುಭವ ಗಳಿಸಿ ಡಾಕ್ಟರ್‌ಗಳಾದ ವಾಕಿಫೀನೆ ನೌಗಳು ಸೇವೆಗೆ ಮುಂದೆ ಬರಬೇಕು. ಸೇವೆ ಮಾಡಲು ಯಾವ ದೇಶಗಳಿಗೆ ಹೋಗಲು ಸುಲಭ ಸಾಧ್ಯವೋ ಅಲ್ಲಿಗೆ ಹೋಗಬೇಕು. ಅವರು ತಮ್ಮನ್ನು ಸೇವೆಗೆ ಅರ್ಪಿಸಿದರೆ ಜಮಾಅತ್ ಅವರನ್ನು ಕಳುಹಿಸಿಕೊಡುವುದು.

ಇದೇ ರೀತಿ ಶಾಲೆಗಳಿಗೆ ಅಧ್ಯಾಪಕರ ಆವಶ್ಯಕತೆ ಇದೆ. ಡಾಕ್ಟರ್ ಮತ್ತು ಟೀಚರ್ ಹುಡುಗರೂ ಹುಡುಗಿಯರೂ ಆಗಬಹುದಾಗಿದೆ. ಆದುದರಿಂದ ಇದರ ಕಡೆಗೆ ಗಮನ ಹರಿಸಿರಿ. ಕೆಲವು ಆರ್ಕಿಟೆಕ್ಟ್‌ಗಳು ಮತ್ತು ಇಂಜಿನಿಯರ್‌ಗಳ ಆವಶ್ಯಕತೆ ಸಹ ಇದೆ. ಅವರು ಕಟ್ಟಡ ನಿರ್ಮಾಣದ ತಜ್ಞರಾಗಬೇಕು. ಮಸ್‌ಜಿದ್‌ಗಳು, ಮಿಶನ್ ಹೌಸ್‌ಗಳು ಸ್ಕೂಲ್‌ಗಳು ಮತ್ತು ಆಸ್ಪತ್ರೆಗಳು ಇವುಗಳ ನಿರ್ಮಾಣದಲ್ಲಿ ಸರಿಯಾಗಿ ಪ್ಲಾನಿಂಗ್ ಮಾಡಲು, ಮೇಲ್ವಿಚಾರಣೆ ನಡೆಸಿ ಜಮಾಅತಿನ ಹಣವನ್ನು ಸದ್‌ವಿನಿಯೋಗ ಮಾಡಲು ಸಾಧ್ಯವಾಗುತ್ತದೆ. ಕಡಿಮೆ ಖರ್ಚು ಮಾಡಿ ಹೆಚ್ಚು ಸೌಲಭ್ಯ ಗಳಿಸಲು ಸಾಧ್ಯವಾಗುತ್ತದೆ. ಅದೇರೀತಿ ಪೇರಾ ಮೆಡಿಕಲ್ ಸ್ಟಾಫ್‌ಗಳ ಆವಶ್ಯಕತೆ ಸಹ ಇದೆ. ಇವು ಜಮಾಅತಿಗೆ ಈಗ ಆವಶ್ಯವಾಗಿರುವ ವಿವಿಧ ಸೇವಾ ವಲಯಗಳಾಗಿವೆ. ಮುಂದೆ ಆವಶ್ಯಕತೆಗಳು ಬದಲಾಗುತ್ತಾ ಇರಬಹುದು. ಕೆಲವು ವಾಕಿಫೀನೆ ನೌಗಳಿಗೆ ಕೆಲವು ವಿಷಯಗಳ ಬಗ್ಗೆ ಹೆಚ್ಚು ಆಸಕ್ತಿ ಇರುತ್ತದೆ. ಅವರು ನನ್ನೊಂದಿಗೆ ಹೇಳಿದಾಗ ನಾನು ಅವರ ಆಸಕ್ತಿಯನ್ನು ನೋಡಿ ಅವರಿಗೆ ಆ ವಿಷಯಗಳಲ್ಲಿ ವಿದ್ಯಾಭ್ಯಾಸ ಮಾಡಲು ಅನುಮತಿ ನೀಡುತ್ತೇನೆ. ಆದರೆ ನಾನು ಇಲ್ಲಿನ ವಿದ್ಯಾರ್ಥಿಗಳೊಂದಿಗೆ ಹೇಳಲು ಬಯಸುವುದೇನೆಂದರೆ ಅವರು ವಿಜ್ಞಾನದ ವಿವಿಧ ವಿಭಾಗಗಳಲ್ಲಿ ಸಂಶೋಧನೆ ನಡೆಸಲು ಮುಂದಾಗಬೇಕು. ವಾಕಿಫೀನೆ ನೌ ಮಾತ್ರವಲ್ಲ ಇತರ ವಿದ್ಯಾರ್ಥಿಗಳು ಸಹ ಇದರಲ್ಲಿ ಸೇರಬೇಕು. ವಿಜ್ಞಾನದ ವಿವಿಧ ವಿಭಾಗಗಳಲ್ಲಿ ನಮ್ಮ ಅತ್ಯುತ್ತಮ ವಿಜ್ಞಾನಿಗಳು ಹುಟ್ಟಲಿ. ಧರ್ಮವನ್ನು ಕಲಿಸಬೇಕಾದವರು ಅಹ್ಮದಿಯರಾಗಿರುವಾಗ, ಲೋಕವು ಧರ್ಮವನ್ನು ಕಲಿಯಲು ನಿಮ್ಮನ್ನು ಆಶ್ರಯಿಸುವುದು. ಅದೇ ರೀತಿ ಲೌಕಿಕ ಜ್ಞಾನ ಕಲಿಸುವವರು ಸಹ ಅಹ್ಮದಿ ಮುಸ್ಲಿಮರಾದರೆ, ಅದಕ್ಕೂ ಲೋಕವು ನಿಮ್ಮನ್ನೇ ಆಶ್ರಯಿಸುವುದು. ಅಂತಹ ಸಂದರ್ಭದಲ್ಲಿ ವಾಕಿಫೀನೆ ನೌ ನಿಸ್ಸಂಶಯವಾಗಿ ಲೌಕಿಕ ಕೆಲಸ ಮಾಡುವರು. ಆದರೆ ಅವರ ಉದ್ದೇಶ ಜ್ಞಾನ ಮತ್ತು ಕೆಲಸದ ಮೂಲಕ ಅಲ್ಲಾಹನ ಏಕತ್ವವನ್ನು ಲೋಕದಲ್ಲಿ ಸಾಬೀತುಗೊಳಿಸುವುದಾಗಿದೆ. ಅವನ ಧರ್ಮವನ್ನು ಲೋಕದಲ್ಲಿ ಹರಡುವುದಾಗಿದೆ.

ಪ್ರತಿಯೊಬ್ಬ ವಾಕಿಫೀನೆ ನೌ ನೆನಪಿಡಬೇಕಾದ ಮುಖ್ಯ ವಿಷಯ ಏನೆಂದರೆ ಅವನಿಗೆ ಲೌಕಿಕ ಕೆಲಸ ಮಾಡಲು ಅನುಮತಿ

ನೀಡಿದಾಗ ಅವನ ಕೆಲಸ ಅವನನ್ನು ಅಲ್ಲಾಹನ ಆರಾಧನೆ, ಧಾರ್ಮಿಕ ಜ್ಞಾನ, ಧಾರ್ಮಿಕ ಸೇವೆ ಇವುಗಳಿಂದ ವಂಚಿತನನ್ನಾಗಿ ಮಾಡಬಾರದು. ಅವನ ಪ್ರಥಮ ಆಧ್ಯತೆ ಪವಿತ್ರ ಖುರ್ಆನಿನ ತಫ್ಸೀರ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳ ಅಧ್ಯಯನವಾಗಿರಬೇಕು. ಇದು ಪ್ರತಿಯೊಬ್ಬ ವಕ್ಫೇ ನೌಗೆ ಆವಶ್ಯಕವಾಗಿದೆ. ವಕ್ಫೇ ನೌ ವಿಭಾಗ 21 ವರ್ಷ ಪ್ರಾಯದ ತನಕದ ಸಿಲೆಬಸ್ ರಚಿಸಿದೆ. ಅನಂತರ ವಾಕಿಫೀನೆ ನೌ ಸ್ವತಃ ತಮ್ಮ ಧಾರ್ಮಿಕ ಅಧ್ಯಯನವನ್ನು ವರ್ಧಿಸಬೇಕಾದುದು ಆವಶ್ಯಕವಾಗಿದೆ.

ನಾನು ತಂದೆ ತಾಯಂದಿರೊಂದಿಗೆ ಹೇಳಲು ಬಯಸುತ್ತೇನೆ. ಅವರು ತಮ್ಮ ಮಕ್ಕಳಿಗೆ ಬಾಯಿ ಮಾತಿನಲ್ಲಿ ಎಷ್ಟು ತರಬೇತಿ ನೀಡಿದರೂ ಅವರ ಮಾತು ಮತ್ತು ಕೃತ್ಯ ಅದರ ಪ್ರಕಾರ ಸಮನ್ವಯ ಹೊಂದುವ ತನಕ ಅದು ಪ್ರಭಾವಶಾಲಿಯಾಗಲಾರದು. ತಂದೆ ತಾಯಂದಿರು ತಮ್ಮ ನಮಾಝ್‌ಗಳ ಸ್ಥಿತಿಯನ್ನು ಮಾದರಿಯನ್ನಾಗಿ ಮಾಡಬೇಕು. ಪವಿತ್ರ ಖುರ್ಆನ್ ಓದುವುದರಲ್ಲಿಯೂ ಕಲಿಸುವುದರಲ್ಲಿಯೂ ತಮ್ಮ ಮಾದರಿ ತೋರಿಸಬೇಕು. ಉನ್ನತ ಸ್ವಭಾವ ಗುಣಗಳ ಮಾದರಿಯಾಗಬೇಕು. ಧಾರ್ಮಿಕ ಜ್ಞಾನ ಗಳಿಸುವ ಬಗ್ಗೆ ಸ್ವತಃ ಪ್ರಯತ್ನ ಮಾಡಬೇಕು. ಸುಳ್ಳು ಹೇಳುವ ಬಗ್ಗೆ ಜಿಗುಪ್ಸೆ ಹೊಂದುವ ಉನ್ನತ ಮಾದರಿ ತೋರಿಸಬೇಕು. ಕೆಲವು ಹುದ್ದೇದಾರರಿಂದ ತೊಂದರೆ ಅನುಭವಿಸಿದ್ದರೂ ಜಮಾಅತಿನ ನಿಝಾಮ್ ವಿರುದ್ಧ ಮತ್ತು ಹುದ್ದೇದಾರರ ವಿರುದ್ಧ ಮಾತನಾಡದಿರಬೇಕು. ಎಂ.ಟಿ.ಎ.ದಲ್ಲಿ ಕನಿಷ್ಠ ನನ್ನ ಖುತುಬಗಳನ್ನಾದರೂ ಸ್ಥಿರವಾಗಿ ಆಲಿಸಬೇಕು. ಇದು ಕೇವಲ ವಾಕಿಫೀನೆ ನೌ ಮಕ್ಕಳ ತಂದೆ ತಾಯಂದಿರಿಗೆ ಮಾತ್ರ ಹೇಳಿದುದಲ್ಲ. ತಮ್ಮ ಮಕ್ಕಳು ಜಮಾಅತಿನ ನಿಝಾಮ್‌ನೊಂದಿಗೆ ಸಂಬಂಧ ಹೊಂದಬೇಕೆಂದು ಇಚ್ಛಿಸುವ ಎಲ್ಲ ತಂದೆ ತಾಯಂದಿರೂ ತಮ್ಮ ಮನೆಗಳನ್ನು ಅಹ್ಮದಿ ಮನೆಗಳನ್ನಾಗಿ ಮಾಡಬೇಕು. ಹೀಗೆ ಮಾಡದಿದ್ದರೆ ಮುಂದಿನ ಪೀಳಿಗೆ ಅಹ್ಮದಿಯ್ಯತ್ತಿನಿಂದ ದೂರ ಸರಿದು ಹೋಗುವುದಲ್ಲದೆ ಅಲ್ಲಾಹನಿಂದಲೂ ದೂರ ಸರಿದು ಹೋಗುವುದು. ತಮ್ಮ ಇಹಲೋಕ ಮತ್ತು ಪರಲೋಕದ ಸ್ಥಿತಿಯನ್ನು ಕೆಡಿಸುವುದು.

ಅಲ್ಲಾಹನು ಎಲ್ಲ ವಾಕಿಫೀನೆ ನೌ ಮಕ್ಕಳನ್ನು ತನ್ನ ಸಾಮಿಪ್ಯ ನೀಡಿ ಅನುಗ್ರಹಿಸಲಿ. ಅವರು ತಖ್ವದಲ್ಲಿ ಚಲಿಸುವವರಾಗಲಿ. ಅವರ ಸಂಬಂಧಿಕರ ಕರ್ಮಗಳು ಸಹ ಅವರನ್ನು ಎಲ್ಲ ವಿಧಗಳ ಅಪಕೀರ್ತಿಗಳಿಂದ ರಕ್ಷಿಸುವವುಗಳಾಗಲಿ. ಪ್ರತಿಯೊಬ್ಬ ಅಹ್ಮದಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪದೇ ಪದೇ ಉಪದೇಶಿಸಿದ ಪ್ರಕಾರದ ವಾಸ್ತವಿಕ ಅಹ್ಮದಿ ಆಗುವ ಭಾಗ್ಯ ಗಳಿಸಲಿ. ನಾವು ಬೇಗನೆ ಲೋಕದಲ್ಲಿ ಅಹ್ಮದಿಯ್ಯತ್ ಮತ್ತು ಯಥಾರ್ಥ ಇಸ್ಲಾಮಿನ ಪತಾಕೆ ಹಾರುವುದನ್ನು ಕಾಣುವಂತಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಉಪದೇಶಿಸುತ್ತಾ ನಮ್ಮೊಂದಿಗೆ ಹೀಗೆ ಹೇಳುತ್ತಾರೆ: ಬೈಅತ್ ಮಾಡಿ ಈ ಜಮಾಅತ್ ಸತ್ಯವೆಂದು ನಂಬುವ ಮೂಲಕ ತನಗೆ ಅನುಗ್ರಹ ಸಿಗುವುದೆಂದು ಯಾರೂ ಭಾವಿಸಬಾರದು. ಕೇವಲ ನಂಬುವುದರಿಂದ ಅಲ್ಲಾಹನು ಸಂತೋಷಪಡಲಾರನು. ಅದರೊಂದಿಗೆ ಸತ್ಕರ್ಮಗಳನ್ನು ಮಾಡಬೇಕು. ನೀವು ಈ ಜಮಾಅತ್‌ಗೆ ಸೇರಿದ ಕಾರಣ ಒಳ್ಳೆಯದಾಗಲು ಪ್ರಯತ್ನಿಸಿರಿ. ಮುತ್ತಖಿಗಳಾಗಿರಿ. ಪ್ರತಿಯೊಂದು ಕೆಡುಕಿನಿಂದ ನಿಮ್ಮನ್ನು ರಕ್ಷಿಸಿರಿ. ನಾಲಗೆಯನ್ನು ಮೃದುಗೊಳಿಸಿರಿ. ಇಸ್ತಿಗ್‌ಫಾರ್ ಮಾಡುತ್ತಾ ಇರಿ. ನಮಾಝ್‌ಗಳಲ್ಲಿ ದುಆ ಮಾಡಿರಿ.

ಅಲ್ಲಾಹನು ನಮಗೆಲ್ಲರಿಗೂ ಈ ಉಪದೇಶದ ಪ್ರಕಾರ ಕರ್ಮಗಳನ್ನು ಮಾಡಲು ಭಾಗ್ಯ ನೀಡಲಿ. ನಾವು ಮತ್ತು ನಮ್ಮ ಮಕ್ಕಳು ಒಳಿತಿನಲ್ಲಿ, ತಖ್ವದಲ್ಲಿ ಸ್ಥಿರವಾಗಿ ನಿಲ್ಲುವವರಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉದ್ದೇಶಲಕ್ಷ್ಯಗಳನ್ನು ಈಡೇರಿಸುವ ಭಾಗ್ಯ ನಮಗೆ ಲಭಿಸಲಿ – ಆಮೀನ್.

*****

*Friday Sermon delivered by Hadrath Khaleefatul Masih Al Khamis*(atba)

*At, Baitul Islam Mosque, Toronto, Canada. U.S.A on 28-10-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon